ಸಮಾಧಾನ ಇರುವುದಿಲ್ಲ, ನಮಗೂ ಇರುವುದಿಲ್ಲ. ಆಕ್ಚುಯಲ್ ಆಗಿ ಏನೇನು ಇಷ್ಯೂಸ್ ಹಾಕಿಕೊಳ್ಳಬೇಕು, ವಾಟರ್‌ರೇಟ್ ಮನ್ನಾ ಮಾಡಬೇಕೇ ಬೇಡವೇ, ಇಂಟರೆಸ್ಟ್ ವೇವ್ ಮಾಡಬೇಕೇ ಬೇಡವೇ, ಶಾರ್ಟ್‌ಟರ್ಮ್ ಲೋನ್‌ನ್ನು ಮೀಡಿಯಂ ಟರ್ಮ್‌ಗೆ ಕನ್‌ವರ್ಟ್ ಮಾಡಬೇಕೇ, ಇದಕ್ಕೆ ಸದನದ ಸಮಿತಿ ಬೇಕಾಗುವುದಿಲ್ಲ.

(ಶ್ರೀ ಯಡಿಯೂರಪ್ಪನವರು ವೆಲ್ ಒಳಗಿಂದ ಮಾತನಾಡತೊಡಗಿದರು)

ಉಪಾಧ್ಯಕ್ಷರು:- ಯಡಿಯೂರಪ್ಪನವರೇ ತಮ್ಮ ಸೀಟಿಗೆ ಹೋಗಿ ಮಾತನಾಡಿ.

ಶ್ರೀ ಎಂ. ರಾಜಶೇಖರಮೂರ್ತಿ:- ಕ್ರಾಪಿನದು ಈಗ ಶುರುಮಾಡುತ್ತೇವೆ, ಇನ್‌ಪುಟ್ ಸಬ್ಸಿಡಿ ಕಾಂಪನ್‌ಸೇಷನ್ ಏನು ಕೊಡಬೇಕು ಅದನ್ನು ಕೂಡ ಶುರುಮಾಡುತ್ತೇವೆ. ಇನ್ನೂ ಒಂದು ತಿಂಗಳಲ್ಲಿ ಬೇಕಾದಷ್ಟು ಸಮಸ್ಯೆಗಳು ಪರಿಹಾರವಾಗುತ್ತವೆ. ಒಂದೇ ಸಲ ಮಾಡಬೇಕೆಂದರೆ ಯಾರಿಗೂ ಸಾಧ್ಯವಾಗುವುದಿಲ್ಲ, ಅವರೇ ಈ ಜಾಗದಲ್ಲಿ ಕುಳಿತಿದ್ದರೂ ಇಷ್ಟು ಅಮೌಂಟ್ ಅವರು ಖರ್ಚು ಮಾಡುತ್ತಿರಲಿಲ್ಲ. ಸಮಸ್ಯೆ ಏನಿದೆ, ಅದರ ಮ್ಯಾಗ್ನಿಟ್ಯೂಡ್ ಏನಿದೆ ಅದನ್ನು ಅರ್ಥ ಮಾಡಿಕೊಂಡು ನೀವು ಹೇಳಬೇಕಾಗುತ್ತದೆ. ಸರಕಾರ ಇದರ ಬಗ್ಗೆ ಹಿಂದೆ ಮುಂದೆ ನೋಡುವುದಿಲ್ಲ. ಬೇಕಾದಷ್ಟು ಅಮೌಂಟ್ ಸರಕಾರದ ಟೇಜರಿಯಲ್ಲಿದ್ದರೆ ಎಲ್ಲಾ ಕೆಲಸ ಒಂದೇ ಸಾರಿ ತೆಗೆದುಕೊಳ್ಳಬಹುದಾಗಿತ್ತು. ಪರಿಸ್ಥಿತಿ ಹಾಗಿಲ್ಲ, ಇದಕ್ಕೆ ಖರ್ಚು ಮಾಡುವುದಕ್ಕೆ ಹೋದರೆ ಬಾಕಿ ವರ್ಕ್ಸ್ ಸಫರ್ ಆಗುತ್ತದೆ.

(ಗೊಂದಲ)

ಉಪಾಧ್ಯಕ್ಷರು:- ಈಗ ಇಲ್ಲಿಂದ (ವೆಲ್‌ನಿಂದ) ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ನಥಿಂಗ್ ಎಲ್ ಗೋಎನ್ ರೆಕಾರ್ಡ್, ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು:- ದಯವಿಟ್ಟು ಕುಳಿತುಕೊಳ್ಳಿ, ನಾವು ಅವರನ್ನು ಕರೆದಿದ್ದೇನೆ. ಅವರು ಮಾತನಾಡುತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ:- ಹೋದ ವರ್ಷ ನಮ್ಮ ಜಿಲ್ಲೆಯಲ್ಲಿ 60 ಸಾವಿರ ಮನೆಗಳು ಬಿದ್ದಿವೆ. ಒಂದೊಂದು ತಾಲ್ಲೂಕಿನಲ್ಲಿ ಬಿಟ್ಟರೆ,.... ಒಂದು ನಿಮಿಷ ತಾಳಿ ಸ್ವಾಮಿ

(ಗೊಂದಲ)

ಉಪಾಧ್ಯಕ್ಷರು:- ಇದೇನು ಇದು, ಇಲ್ಲಿಂದ ಒಬ್ಬರಿಗೊಬ್ಬರಿಗೆ ಈ ರೀತಿ ಮಾತನಾಡಿಕೊಂಡು, ಬೇರೆಯವರು ಮಾತನಾಡುವುದಕ್ಕೆ ಅಡ್ಡಿಪಡಿಸಬಾರದು.

ಶ್ರೀ ಸಿ. ಬೈರೇಗೌಡ:- ಒಂದು ತಾಲ್ಲೂಕಿನಲ್ಲಿ ಬಿಟ್ಟರೆ ಬೇರೆ ತಾಲ್ಲೂಕಿನಲ್ಲಿ ಒಂದು ಮನೆ ಕೂಡ ಆಗಿಲ್ಲ, ಈ ವರ್ಷವೂ ಸಹ ಮಳೆಯಿಂದ ನಮ್ಮ ಜಿಲ್ಲೆಯಲ್ಲಿ ತರಕಾರಿ ಇತ್ಯಾದಿಗಳು ಹಾಳಾಗಿ, ನೂರಾರು ಕೋಟಿ ರೂಪಾಯಿಗಳಷ್ಟು ಬೆಳೆ ಹಾಳಾಗಿದೆ. ಅಲ್ಲಿಗೆ ಯಾವೊಬ್ಬ ಅಧಿಕಾರಿ ಹೋಗಿ ಸರಕಾರಕ್ಕೆ ವರದಿ ಕಳುಹಿಸಿರತಕ್ಕಂಥಾದ್ದು ಆಗಿಲ್ಲ. ಏನೂ ಕೂಡ ಆಗಿಲ್ಲ. ನೂರಾರು ಕೋಟಿ ರೂಪಾಯಿ ಹಾಳಾಗಿದೆ. ಇದರ ಬಗ್ಗೆ ಪ್ರಶ್ನೆ ಕೇಳಿದೆ ಏನೂ ಉತ್ತರ ಹೇಳಲಿಲ್ಲ. ನಾನು ಒಂದು ಸಲಹೆ ಸರಕಾರಕ್ಕೆ ಕೊಡುತ್ತೇನೆ.

ಉಪಾಧ್ಯಕ್ಷರು:- ಏನು ಉತ್ತರ ಹೇಳಬೇಕು ಅದನ್ನು ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ:- ಅವರು ನನಗೆ ಹೇಳಲಿಲ್ಲ. ಅವರು ಉತ್ತರ ಕೊಟ್ಟಿದ್ದು